# ಪಾಠ 9

# ರಕ್ಷಣೆಯ ಸಂಕೇತಗಳು

## ಮೂಲ : ಬ್ರೂಸ್ ಎನ್ ಕ್ಯಾಮರಾನ್, ಅನುವಾದ : ಪಾಸ್ಟರ್ ಚೆಲುವರಾಜು

**ಪೀಠಿಕೆ: –** ನಿಮಗೆ ಯಾವಾಗಲಾದರೂ ವೈದ್ಯರ ಬಳಿ ಹೋದದ್ದು ಮತ್ತು ಅವರು ಏನು ಹೇಳುತ್ತಾರೋ ಅದು ಅರ್ಥವಾಗದೆ ಹೋದ ಅನುಭವವಾಗಿದೆಯೇ? ನನಗೊಬ್ಬ ಸ್ಪೆಷಲಿಸ್ಟ್ ಇದ್ದಾರೆ. ಅವರು ಮಾತನಾಡುವಾಗ ಬಹಳ ವೈದ್ಯಕೀಯ ಪದಗಳನ್ನು ಬಳಸುತ್ತಾರೆ. ಎಷ್ಟೋ ಪದಗಳು ನನಗೆ ಅರ್ಥವಾಗುವುದಿಲ್ಲ. ಆಗ ನಾನು ಅವರ ವಾಗ್ಝರಿಯನ್ನು ನಿಲ್ಲಿಸುತ್ತೇನೆ. ನನಗೆ ಅರ್ಥವಾಗದ ಪದಗಳನ್ನು ವಿವರಿಸುವಂತೆ ಅವರನ್ನು ಕೇಳಿಕೊಳ್ಳುತ್ತೇನೆ. ನಾನು ವಕೀಲ ನನ್ನ ಬಳಿ ಅನೇಕ ಉದ್ಯೋಗಿಗಳು ಸಮಸ್ಯೆಗಳನ್ನು ತೆಗೆದುಕೊಂಡು ಬರುತ್ತಾರೆ. ಅದರಲ್ಲಿ ಮುಖ್ಯವಾಗಿ ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಪಟ್ಟದ್ದನ್ನು ಹೇಳುತ್ತಿದ್ದೇನೆ. ಕೆಲವರು ಧಾರ್ಮಿಕ ನಂಬಿಕೆಗಳಿಗೂ ಮತ್ತು ಅವರು ಮಾಡುವ ಕೆಲಸಕ್ಕೂ ಘರ್ಷಣೆಗಳಾಗುತ್ತವೆ. ಹಾಗೆ ಘರ್ಷಣೆಯಾದಾಗ, ಆ ಘರ್ಷಣೆ ಏನು ಎಂಬುದನ್ನು ಮಾಲಿಕ ಮತ್ತು ಉದ್ಯೋಗಿಗಳು (ಮುಖ್ಯವಾಗಿ ಕ್ರಿಶ್ಚಿಯನ್ನರು) ತಮ್ಮ ಮಾಲಿಕರಿಗೆ ಧರ್ಮ ಸಂಬಂಧವಾದ ಪತ್ರಗಳನ್ನು ಬರೆಯುವಾಗ, ಸಾರ್ವಜನಿಕರು ಅರ್ಥಮಾಡಿಕೊಳ್ಳಲಾಗದ ಪದಗಳ ಬಗ್ಗೆ ನಾನು ತುಂಬಾ ಎಚ್ಚರ ವಹಿಸುತ್ತೇನೆ. ಅಂಥಹ ಪದಗಳು ನನ್ನ ಕಣ್ಣಿಗೆ ಬಿದ್ದಾಗ, ಆ ಉದ್ಯೋಗಿಯನ್ನು ಕುರಿತು, ಆ ಪದ ಬದಲಾಯಿಸುವ ಸೂಚನೆ ಕೊಡುತ್ತೇನೆ. ಸಾರ್ವಜನಿಕರಿಗೆ ಅರ್ಥವಾಗುವ ಪದಬಳಕೆಯನ್ನು ಉತ್ತೇಜಿಸುತ್ತೇನೆ. ನಾವು ಹಳೆಯ ಒಡಂಬಡಿಕೆಯ ಗುಡಾರ ಸೇವೆಯನ್ನು ಕುರಿತು ಕಲಿಯುವಾಗ ಸಂಕೇತಗಳನ್ನು ಏಕೆ ಬಳಸಲಾಯಿತು ಎಂಬುದಕ್ಕೆ ಕಾರಣಗಳನ್ನು ತಿಳಿದುಕೊಂಡೆವು. ಈ ವಾರ, ಈ ವಿಷಯವಾಗಿ ಇನ್ನೂ ಆಳವಾಗಿ ಅಧ್ಯಾಯನ ಮಾಡಲಿದ್ದೇವೆ.

## I. ವಿಮೋಚಿಸಲ್ಪಟ್ಟವರು?

(ಅ) **1 ಪೇತ್ರ 1: 1–2** ಈ ಪತ್ರ ಯಾರಿಗೆ ಬರೆಯಲ್ಪಟ್ಟಿದೆ?
[ದೇವರಿಂದ ಆರಿಸಲ್ಪಟ್ಟವರಿಗೆ – ಅಂದರೆ ನಮಗೆ ]

1. ಪೇತ್ರನು ನಮ್ಮನ್ನು ‘‘ಪ್ರವಾಸಿ’’ಗಳು ಎಂದು ಕರೆದಿದ್ದಾನೆ. ಯಾರಾದರು ನಿಮ್ಮನ್ನು ನೋಡಿ ನೀನು ಪ್ರವಾಸಿಯೋ? ಎಂದು ಕೇಳಿದ್ದುಂಟೇ? ನನ್ನ ಮಗ ನನಗೆ ‘‘ಎಸ್ ಎಲ್ ಕೆ’’ ಎಂಬ ಒಂದು ಪದವನ್ನು ಪರಿಚಯ ಮಾಡಿಸಿದ್ದಾನೆ. ಅದನ್ನು ಆಂಗ್ಲದಲ್ಲಿ ‘‘ಫನ್ನಿ ಲುಕಿಂಗ್ ಕಿಡ್’’ ಎನ್ನುತ್ತಾರೆ. ಅಂದರೆ ಆ ಮಗು ನೋಡಲಿಕ್ಕೆ ಒಂದು ರೀತಿ

ವಿಚಿತ್ರವಾಗಿದೆಯಲ್ಲ ಎಂಬ ಅರ್ಥ ಕೊಡುತ್ತದೆ. ವೈದ್ಯರ ಬಳಿಗೆ, ವೈದ್ಯಕೀಯ ಸಮಸ್ಯೆಗಳಿಂದ ಆಗಾಗ್ಗೆ ಬರುವ ಮಕ್ಕಳನ್ನು ವೈದ್ಯರು ಹೀಗೆ ಕರೆಯುವುದುಂಟು ಆ ಮಕ್ಕಳ ನೋಟವೇ, ಅವರಿಗಿರುವ ಸಮಸ್ಯೆಯ ಸೂಚನೆ. ಪ್ರಪಂಚದ ನೋಟಕ್ಕೆ ನಾವು ‘‘ಫನ್ನಿ ಲುಕಿಂಗ್ ಕಿಡ್’’ ಎಂಬಂತೆ ಕಾಣಿಸುತ್ತಿದ್ದೆವೆಯೇ? [ಹಾಗೆ ಅನ್ನಿಸುತ್ತಿದೆ. ನಾವು ಪ್ರವಾಸಿಗಳಲ್ಲದಿರಬಹುದು. ದೇವರಿಂದ ಅಂದುಕೊಳ್ಳದಿರಲೆಂದು ಪೇತ್ರನು ಸಲಹೆ ನೀಡುತ್ತಿದ್ದಾನೆ. ಹೃದಯದಲ್ಲಿ ಆಗುವ ಬದಲಾವಣೆಗಳು, ನಮ್ಮನ್ನು ಈ ಲೋಕದಲ್ಲಿ ಪ್ರವಾಸಿಗಳನ್ನಾಗಿ ಮಾಡುತ್ತವೆ.]

2. ನಾವು ಪ್ರವಾಸಿಗಳಾಗಿ ಆರಿಸಲ್ಪಡುವದು ಹೇಗೆ? [**1 ಪೇತ್ರ 1:2**] ಎರಡು ರೀತಿಯ ಚಿತ್ರಣವನ್ನು ಕೊಡುತ್ತದೆ: ಯೇಸುಸ್ವಾಮಿಯ ರಕ್ತದಿಂದ ಪ್ರೋಕಿತರಾಗಿ ಪಾಪಪರಿಹಾರಪಡೆಯುವುದು ಒಂದು ಚಿತ್ರ (ಭೂಮಿಯ ಮೇಲಿನ ಗುಡಾರ ಸೇವೆಯ ಚರ್ಚೆಯನ್ನು ಜ್ಞಾಪಕಮಾಡಿಕೊಳ್ಳು.) ಪವಿತ್ರಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ ದೇವರಿಗೆ ವಿಧೇಯರಾಗುವರು ಇನ್ನೊಂದಿ ಚಿತ್ರ. ಈ ರೀತಿಯಾಗಿ ನಾವು ಮುಂದಿನ ಲೋಕಕ್ಕೆ ಸಿದ್ಧರಾಗುತ್ತೇವೆ.

(ಆ) **1 ಪೇತ್ರ 1:3–5ನ್ನು ಓದಿಕೊಳ್ಳಿ.** ಇಲ್ಲಿರುವ ಎಲ್ಲಾ ಸಂಕೇತಗಳನ್ನು ಗಮನಿಸಿ. ಕಳೆದ ವಾಕ್ಯ ‘‘ರಕ್ತದಿಂದ ಪ್ರೋಕ್ಷಿತರಾಗುವದಕ್ಕೂ’’ ಎಂಬ ಉಲ್ಲೇಖವನ್ನು ನೀಡಿತು. ಈ ವಾಕ್ಯ ಉಳಿದೆಲ್ಲಾ ಸಂಗತಿಗಳೊಂದಿಗೆ ‘‘ತಿರಿಗಿ ಜೀವಿಸುವ’’ ಮತ್ತು ‘‘ಬಾಧ್ಯತೆ’’ ಎಂಬೆರಡು ವಿಷಯಗಳನ್ನು ಉಲ್ಲೇಖಿಸುತ್ತಿದೆ. ನಾವು ಎಂಥಹ ಕುಟುಂಬದಲ್ಲಿಹುಟ್ಟಲಿದ್ದೇವೆ? ಆ ಕುಟುಂಬದಲ್ಲಿರುವ ಐಶ್ವರ್ಯ ಮತ್ತು ಅಂತಸ್ತುಗಳೇನು? [ಕ್ರೈಸ್ತರು ಒಂದು ನೂತನ ಲೋಕವನ್ನು ಎದುರು ನೋಡುತ್ತಿದ್ದಾರೆ. ಪೇತ್ರನು, ದೇವರ ಕುಟುಂಬಕ್ಕೆ ತಿರಿಗಿ ಜೀವಿಸುವಿಕೆ, ‘‘ಜೀವಕರವಾದ ನಿರೀಕ್ಷೆಯ’’ನ್ನುಂಟುಮಾಡಿ, ಮುಂದೆ ಬರಲಿರುವ ಲೋಕದಲ್ಲಿ ಬಾಧ್ಯತೆ ಪಡೆಯುವುದನ್ನು ಕುರಿತು ಇಲ್ಲಿ ಮಾತನಾಡುತ್ತಿದ್ದಾನೆ. ಅಂಥಹ ಒಂದು ಬಾಧ್ಯತೆ, ಇಂದಿನ ಸ್ಟಾಕ್ ಮಾರ್ಕೆಟಿನ ಹಾಗೆ ಎಂದಿಗೂ ಬಿದ್ದುಹೋಗದು. ಈ ವಿವರಣಗಳು ಸ್ವಲ್ಪ ಒರಟೊರಟು ಎನಿಸಬಹುದಲ್ಲವೆ?]

1. ಈ ಪರಿವರ್ತನೆ ಈಗ ನಡೆಯಬಹುದೇ? [ಹೌದು. ನಾವು ಮತ್ತೆ ದೀಕ್ಷಾಸ್ನಾನದ ಮೂಲಕ ಹುಟ್ಟಿದಾಗ ದೇವರ ಕುಟುಂಬಕ್ಕೆ ಸೇರಬಹುದು. ನಾವು ದೀಕ್ಷಾಸ್ನಾನ ತೆಗೆದುಕೊಂಡಾಗ, ಯೇಸುಸ್ವಾಮಿಯ ದೀಕ್ಷಾಸ್ನಾನದಲ್ಲಿ ಐಕ್ಯರಾಗುತ್ತೇವೆ ಎಂಬ ಸಂಗತಿಯನ್ನು ಕಳೆದ ವಾರದ ಪಾಠದಲ್ಲಿ ಕಲಿತ್ತಿದ್ದೇವೆ. ರೋಮ 6:4ನ್ನು ಓದಿನೋಡಿ.]

(ಇ) **1 ಪೇತ್ರ 1:6–7ನ್ನು ಓದಿಕೊಳ್ಳಿ.** ನಾವು ಪ್ರವಾಸಿಗರು ಮತ್ತು ನಾನಾ ಕಷ್ಟಗಳಲ್ಲಿ ದುಃಖಿಸುವವರು. ಈ ವಿಷಯವನ್ನು ಕುರಿತು ಪೇತ್ರನು ಹರ್ಷಿಸುವುದೇಕೆ? [ಒಂದು ಪ್ರತಿಷ್ಠಿತ ಕಂಪನಿಯಲ್ಲಿ ದೊಡ್ಡ ಜವಾಬ್ದಾರಿಯುಳ್ಳ ಅಧಿಕಾರ ಸ್ಥಾನ ನಿಮಗೆ ಲಭಿಸಿತು

ಎಂದಿಟ್ಟುಕೊಳ್ಳಿ. ಈ ಹೊಸಜವಾಬ್ದಾರಿಯಲ್ಲಿ ಎದುರಾಗುವ ಸಮಸ್ಯೆಗಳು ಬಹಳ ಕಷ್ಟ ಎನಿಸಬಹುದು, ಆದರೆ ನೀವು ಮಾಡಬೇಕಾಗಿರುವ ಕೆಲಸವನ್ನು ಉತ್ತಮವಾಗಿ ಮಾಡಲು ಇವು ಬಹಳ ಸಹಾಯಕಾರಿಯಾಗಿರುತ್ತವೆ. ನೀವು ಆ ಹೊಸ ಅಧಿಕಾರಸ್ಥಾನ ಅಲಂಕರಿಸುವ ಹುಮ್ಮಸ್ಸಿನಲ್ಲಿರುವಾಗ, ಈ ಸಮಸ್ಯೆಗಳು ಕಷ್ಟ ಎಂದೆನಿಸುವುದಿಲ್ಲ. ಹಾಗೆಯೇ ನಾವು ಹೊಸಲೋಕದಲ್ಲಿ ಪಡೆಯುವ ಬಾಧ್ಯತೆಗಾಗಿ ಮತ್ತೆ ಹುಟ್ಟಿ ಬಂದದ್ದು, ಮುಂದೆ ಎದುರಾಗುವ ಸಮಸ್ಯೆಗಳಿಗೆ ಅಷ್ಟೇನು ಗಮನಕೊಡದಿರಲು ಸಹಾಯಕವಾಗಿದೆ. ಅಂಥಹ ಸಮಸ್ಯೆಗಳು ದೇವರ ಮೇಲಿಟ್ಟಿರುವ ಭರವಸೆಯನ್ನು ಬಲಪಡಿಸುತ್ತದೆ.)

(ಈ) **1 ಪೇತ್ರ 1:17.** ಈ ಲೋಕದಲ್ಲಿ ಪ್ರವಾಸಿಕರಂತೆ ಜೀವಿಸಲು ಪೇತ್ರನು ಇಲ್ಲಿ ಹೇಳಿದ್ದಾನೆ. ಇದರ ಅರ್ಥವೇನು? ಒಂದು ದೇಶದ ಪ್ರಜೆಯೊಂದಿಗೆ ಹೋಲಿಸಿ ಆ ದೇಶಕ್ಕೆ ಬಂದ ಪ್ರವಾಸಿಯ ಜೀವನ ಹೇಗಿರುತ್ತದೆ ಎಂದು ಹೇಳಬಲ್ಲಿರಾ?

(ಉ) **1 ಪೇತ್ರ 1:18–19ನ್ನು ಓದಿಕೊಳ್ಳಿರಿ.** ನಾವು ಪ್ರವಾಸಿಗಳಾಗಿ ಬಿಡುಗಡೆ ಹೊಂದಿದ್ದೇವೆ. ಅದರ ಯಾವುದರಿಂದ ಬಿಡುಗಡೆ ಹೊಂದಿದ್ದೇವೆ. [''ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ನಮಗೆ ಬಿಡುಗಡೆಯಾದದ್ದು''.]

1. ಶೂನ್ಯ ಜೀವನ ಎಂದರೇನು? ಅದರ ಅರ್ಥವೇನು? [ಅರ್ಥವಿಲ್ಲದ ಮತ್ತು ಭವಿಷ್ಯವಿಲ್ಲದ ಜೀವನವೇ ಶೂನ್ಯ ಜೀವನ]

2. ಬಿಡುಗಡೆಗೊಂಡ ಜೀವನವೆಂದರೆ: ''ಮತ್ತೆ ಕೊಂಡುಕೊಂಡ'' ಜೀವನ. ಆದರೆ ಇಲ್ಲಿ ಹಣದಿಂದ ನಮ್ಮನ್ನು ಯಾರೂ ಕೊಂಡುಕೊಂಡಿಲ್ಲ. ಯೇಸುಸ್ವಾಮಿಯ ರಕ್ತ ಹಣಕ್ಕಿಂತ ಹೆಚ್ಚಿನ ಬೆಲೆಯನ್ನು ನಮಗಾಗಿ ತೆತ್ತಿದೆ. ಯಾವ ರೀತಿಯ ಭವಿಷ್ಯ ಅಥವಾ ಅರ್ಥಪೂರ್ಣ ಜೀವನವನ್ನು ಯೇಸುಸ್ವಾಮಿ ನಮ್ಮ ಸಲುವಾಗಿ ಖರೀದಿ ಮಾಡಿದ್ದಾರೆ? [ಎರಡು ರೀತಿಯ ಕಲೆಯ ಕೆಲಸವನ್ನು ನೋಡೋಣ. ಒಂದು: ನಮ್ಮ ತಂದೆ ಮರದಲ್ಲಿ ಒಂದು ಕೆತ್ತನೆಯ ಚಿತ್ರ ಬಿಡಿಸಿದ್ದಾರೆ. ಅದು – ತಲತಲಾಂತರಕ್ಕೆ ನಮ್ಮ ಕುಟುಂಬದವರಲ್ಲಿರುತ್ತದೆ. ಇನ್ನೊಬ್ಬ ಕಡಲ ತೀರದ ಮರಳಿನ ಮೇಲೆ ಒಂದು ಸುಂದರವಾದ ಚಿತ್ರ ಮೂಡಿಸಿದ್ದಾನೆ. ಬಹುಶಃ ಒಂದು ವಾರ ಈ ಚಿತ್ರ ಅಲ್ಲಿದ್ದರೆ ಹೆಚ್ಚು. ನಂತರ ಅದು ಕಣ್ಮರೆಯಾಗುತ್ತದೆ. ಆದ್ದರಿಂದ ಯೇಸುಸ್ವಾಮಿ ಈಗ ನಮ್ಮನ್ನು ನಿತ್ಯಕಾಲಕ್ಕೂ ಉಳಿಯುವಂಥ ಚಿತ್ರ ಬಿಡಿಸಲು ಇಲ್ಲಿಟ್ಟಿದ್ದಾರೆ.

(ಊ) **2 ಕೊರಿಂಥ 5:16ನ್ನು ಓದಿಕೊಳ್ಳಿ.** ಹೊಸ ಹುಟ್ಟಿನೊಂದಿಗೆ ನಮ್ಮ ಕಣ್ಣಿನ ದೃಷ್ಟಿಯು ಬದಲಾಯಿತೇ? [ಹೌದು.]

(i) “ನಾವು ಯಾರನ್ನೂ ಶರೀರಸಂಬಂಧವಾಗಿ ಅರಿತುಕೊಳ್ಳುವದಿಲ್ಲ” ಎಂಬುದರ ಅರ್ಥವೇನು? [ಶರೀರಸಂಬಂಧವಾಗಿ ಎಂದರೆ ಒಬ್ಬ ವ್ಯಕ್ತಿಯನ್ನು ಪ್ರಾಪಂಚಿಕವಾಗಿ ಅರಿಯುವುದು ಎಂದರ್ಥ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಒಬ್ಬ ವ್ಯಕ್ತಿಯ ಸಿರಿತನ-ಬಡತನ, ಆತನ ಹಾವಭಾವ, ನಿಲು-ನೋಟ, ಹಾಗೂ ಆತನ ಸಾಮಾಜಿಕ ಸ್ಥಾನಮಾನಗಳನ್ನು ಅರಿಯುವುದು. ಪ್ರಪಂಚ ನಮ್ಮನ್ನು “ಫನ್ನಿ ಲುಕಿಂಗ್ ಕಿಡ್” ಗಳನ್ನು ಕಂಡಂತೆ ಕಾಣಬಹದು. ಆದರೆ ನಾವು ಪರಿವರ್ತನೆಗೊಂಡಾಗ ಇವೆಲ್ಲವುಗಳನ್ನು ಹೊಸ ಬೆಳಕಿನಲ್ಲಿ ಕಾಣುತ್ತೇವೆ. ಎಲ್ಲದರ ಹಿಂದಿರುವ ನಿತ್ಯತ್ವ ಈಗ ನಮಗೆ ಅರ್ಥವಾಗುತ್ತದೆ.

(ii) ನಾವು ಕ್ರಿಶ್ಚಿಯನ್ನರಾದ ಮಾತ್ರಕ್ಕೆ, ಆಸ್ತಿ-ಅಂತಸ್ತು, ನೋಟ-ನಿಲುವು, ಸ್ಥಾನ-ಮಾನಗಳನ್ನು ಕಡೆಗಾಣಿಸುವುದೇಕೆ? [ಇದು ನಮ್ಮನ್ನು ಮತ್ತೇ 1 **ಪೇತ್ರ 1:4** ರತ್ತ ನಮ್ಮ ಗಮನವನ್ನು ಕೊಂಡೊಯ್ಯುತ್ತದೆ. ಪರಲೋಕದಲ್ಲಿ ನಾವು ಗಳಸಿಟ್ಟ ಆಸ್ತಿ ಬಹಳ ಜೋಪಾನವಾಗಿರುತ್ತದೆ. ಈ ಭೂಮಿಯ ಮೇಲೆ ನಾವು ಗಳಸಿಟ್ಟು ಆಸ್ತಿ-ಪಾಸ್ತಿ, ಉತ್ತಮ ನೀಲವು-ನೋಟ, ಗಳಸಿಕೊಂಡ ಸ್ಥಾನ-ಮಾನ ಎಲ್ಲ ಬಾಡಿಹೋಗುತ್ತವೆ. ನಾವೆಲ್ಲ ವೃದರಾಗುತ್ತೇವೆ ಮತ್ತು ಸಾಯುತ್ತೇವೆ. ಹೀಗಾಗಿ ನಮ್ಮ ನೂತನ ಕಣ್ಣೋಟ ನಿತ್ಯಕಾಲಕ್ಕೆ ಏನು ಮುಖ್ಯವೋ ಅದರತ್ತ ನಮ್ಮ ಗಮನ ಹರಿಸಲು ನಮಗೆ ಸಹಾಯಮಾಡುತ್ತದೆ.]

## II. ಸಂಧಾನ

(ಅ) **2 ಕೊರಿಂಥ 5:17-18ನ್ನು ಓದಿಕೊಳ್ಳಿ.** ನಾನು ಒಬ್ಬರೊಂದಿಗೆ ಸಂಧಾನ ಮಾಡಿಕೊಂಡೆ ಎಂದರೆ ಇದಕ್ಕೆ ಹಿಂದೆ ನನಗೂ – ಅವರಿಗೂ ಮಧ್ಯೆ ಏನೋ ವ್ಯಾಜ್ಯವಿತ್ತು ಎಂದರ್ಥ. ನಾನು ದೇವರೊಂದಿಗೆ ಯಾವತ್ತು ಜಗಳವಾಡಿಲ್ಲ! ಹಾಗಾದರೆ ನಾನೇತಕೆ ದೇವರೊಂದಿಗೆ ಸಂಧಾನಮಾಡಿಕೊಳ್ಳಬೇಕು. **2 ಕೊರಿಂಥ 5:19ನ್ನು ಓದಿಕೊಳ್ಳಿ.** ನಾವು ಪಾಪಮಾಡಿದಾಗ, ನಾವು ದೇವರೊಂದಿಗೆ ಘರ್ಷಣೆ ಮಾಡಿಕೊಳ್ಳುತ್ತೇವೆ! ಯೇಸುಸ್ವಾಮಿ ಇದಕ್ಕೊಂದು ದಾರಿಮಾಡಿದ್ದಾರೆ: ನಮ್ಮ ಪಾಪಗಳನ್ನು ತಮ್ಮ ಮೇಲೆ ಹಾಕಿಕೊಂಡು ನಮಗೆ ದೊಡ್ಡ ಉಪಕಾರಮಾಡಿದ್ದಾರೆ. ದೇವರಿಗೂ ಮತ್ತು ಮಾನವರಿಗೂ ನಡುವಿನ ಘರ್ಷಣೆಯನ್ನು ಯೇಸುಸ್ವಾಮಿ ಸರಿಪಡಿಸಿದ್ದಾರೆ.)

(ಆ) **2 ಕೊರಿಂಥ 5:20-21ನ್ನು ಓದಿಕೊಳ್ಳಿ.** ಪೌಲನು ದೇವರ ಪರವಾಗಿ ಮಾತನಾಡುತ್ತಿರುವುದಾಗಿ ನಮಗೆ ಹೇಳುತ್ತಿದ್ದಾನೆ. ದೇವರ ಪರವಾಗಿ ಮಾರಾಟ ಮಾಡುತ್ತಿದ್ದಾನೆ. ಅವನು ಏನನ್ನು ಮಾರುತ್ತಿದ್ದಾನೆ. [ಸಂಧಾನ ನಮಗೆ ಎರಡು ವಿರುದ್ಧಾತ್ಮಕ ಪ್ರಪಂಚಗಳಿವೆ – ಒಂದು ನಾವು ಬಾಳುತ್ತಿರುವ ಈ ಭೂಮಿ, ಮತ್ತೊಂದು ಬರಲಿರುವ ನೂತನ ಭೂಮಿ. ದೇವರ ಮತ್ತು ನೂತನ ಭೂಮಿಯ

ರಾಯಭಾರಿಯಾಗಿ ಕೆಲಸ ಮಾಡುತ್ತಿರುವ ಪೌಲನು, ನಮ್ಮ ಪಾಪಭಾರವನ್ನು ಯೇಸುಸ್ವಾಮಿಯ ಮೇಲೆ ಹಾಕುವಂತೆಯೂ ಮತ್ತು ಆತನ ನೀತಿಯನ್ನು ನಾವು ಧರಿಸಬೇಕೆಂತಲೂ ಮನವಿ ಮಾಡಿಕೊಳ್ಳುತ್ತಿದ್ದಾನೆ.]

(ಇ) **ಮತ್ತೊಮ್ಮೆ 2 ಕೊರಿಂಥ 5:16ನ್ನು ಓದಿಕೊಳ್ಳೋಣ.** ಪೌಲನು ನಮ್ಮನ್ನು ಇಲ್ಲಿ ಹೇಗೆ ನೋಡುತ್ತಿದ್ದಾನೆ? [ಯೇಸುಸ್ವಾಮಿ ಈ ಭೂಮಿಯ ಮೇಲೆ ತನ್ನ ರಾಜ್ಯ ಸಂಸ್ಥಾಪನೆ ಮಾಡುತ್ತಾನೆಂದು ಶಿಷ್ಯರುಗಳು ಎದುರು ನೋಡುತ್ತಿದ್ದನ್ನು ಜ್ಞಾಪಿಸಿಕೊಳ್ಳಿರಿ. ಆದರೆ ನಂತರದಲ್ಲಿ ಅವರು ಯೇಸುಸ್ವಾಮಿಯ ರಾಜ್ಯ ಪರಲೋಕದಲ್ಲೂ ಮತ್ತು ನೂತನ ಭೂಮಿಯಲ್ಲೂ ಇರುತ್ತದೆಯೆಂದು – ತಿಳುಕೊಂಡರು. ದೇವರ ರಾಜ್ಯವಿರುವದು ನಿಜ ಎಂದು ನಿಮಗನಸಿದಾಗ, ಜನರನ್ನು ನೀವು ಶ್ರೀಮಂತರು. ಬಲಶಾಲಿಗಳು ಅಥವಾ ಸೌಂದರ್ಯವುಳ್ಳವರು ಎಂದು ಎಣಿಸದೆ, ಅವರು ಈ ಲೋಕದ ಪ್ರಜೆಗಳೋ ಅಥವಾ ಬರಲಿರುವ ನೂತನ ಭೂಮಿಯ ಪ್ರಜೆಗಳೋ ಎಂದೆಣಿಸುತ್ತೀರಿ.

## III. ನ್ಯಾಯತೀರ್ಪು

(ಅ) **ರೋಮ 3:19–20ನ್ನು ಓದಿಕೊಳ್ಳಿ.** ನಮ್ಮ ಸುತ್ತಮುತ್ತ ವಾಸಿಸುತ್ತಿರುವ ನಾಡಿನ ಪ್ರಜೆಗಳನ್ನೂ ಮತ್ತು ಪರದೇಶಿಯರನ್ನೂ ನೋಡುವಾಗ, ಅವರಲ್ಲಿ "ಒಳ್ಳೆಯವರಾಗಿ" ಕಾಣುವವರನ್ನು ಮತ್ತು ನಮ್ಮ ಒಳ್ಳೆಯ ನೆರೆಹೊರೆಯವರನ್ನು ನೂತನ ಭೂಮಿಗೆ ಅರ್ಹರಾದ ಪ್ರಜೆಗಳೆಂದು ತೀರ್ಮಾನಿಸಬಹುದೇ? [ಇಲ್ಲ. ಒಳ್ಳೆಯವರಾದ ಕಾರಣಕ್ಕೆ ಮಾತ್ರ ಅವರನ್ನು ನೀತಿವಂತರೆಂದು ನ್ಯಾಯತೀರ್ಪು ನೀಡಲಾಗದು. ಯಾರು ದೇವರ ವಾಕ್ಯಗಳನ್ನು ಓದುತ್ತಾರೋ ಮತ್ತು ಈ ಲೋಕದ ಮೇಲೆ ಜೀವಿಸಲು ದೇವರ ಪ್ರಮಾಣಗಳನ್ನು ಅಳವಡಿಸಿಕೊಳ್ಳುತ್ತಾರೋ ಅವರೆಲ್ಲರನ್ನು ನೀತಿವಂತರೆಂದು ಕರೆಯಲಾಗದು. ಈ ಮೂಲಕ ಅವರುಗಳು ತಾವೇಷ್ಟು ಪಾಪಿಗಳೆಂಬುದನ್ನು ಇನ್ನಷ್ಟು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುತ್ತಾರೆ:]

(ಆ) **ರೋಮ 3:21–24ನ್ನು ಓದಿಕೊಳ್ಳಿ.** ನಾವು ನೀತಿವಂತರಾಗುವದು ಹೇಗೆ? ಬರಲಿರುವ ನಿತ್ಯರಾಜ್ಯಕ್ಕೆ ನಾವು ಪ್ರಜೆಗಳಾಗುವದು ಹೇಗೆ? [ಯೇಸುಸ್ವಾಮಿಯಿಂದ ನಮಗೆ ದೊರಕುವ ಬಿಡುಗಡೆಯ ಮೇಲಿನ ನಂಬಿಕೆಯಿಂದಲೇ.]

(i) ಇನ್ನಾವುದಾದರೂ ದಾರಿಯಿಂದ ನಾವಿದನ್ನು ಸಾಧಿಸಬಹುದೇ? [ಇಲ್ಲ! ನಂಬುವವರೆಲ್ಲರಿಗೂ ಬಿಡುಗಡೆಯುಂಟು. "ಇದರಲ್ಲಿ ಭಿನ್ನಭಾವಗಳೇನೂ ಇಲ್ಲ."]

(ಇ) **ರೋಮ 3:25–26ನ್ನು ಓದಿಕೊಳ್ಳಿ**. ನಾವು ಸಾಯಬೇಕಾಗಿದ್ದ ಸ್ಥಳದಲ್ಲಿ ನಮಗಾಗಿ ಅವರು ಮಡಿದರು ಮತ್ತು ನಮ್ಮ ಪಾಪಗಳಿಗೆ ನಾವು ಅನುಭವಿಸಬೇಕಾಗಿದ್ದ ದಂಡನೆಯನ್ನು ಶಿಲುಬೆಯ ಹಿಂಸೆಯ ಮರಣದ ಮೂಲಕ ಅವರು ಅನುಭವಿಸಿದರು ಎಂಬುದನ್ನು ನಾವು ಒಪ್ಪಿಕೊಂಡಾಗ, ನಮ್ಮ ಅಂತ್ಯ ಗತಿಯೇನು? [ನಮಗೆ ನ್ಯಾಯತೀರ್ಪಾಯಿತು! ಬರಲಿರುವ ನಿತ್ಯರಾಜ್ಯಕ್ಕೆ ಪ್ರಜೆಗಳಾಗಲು ನಾವು ಅರ್ಹರಾದೆವು.]

(ಈ) ಸ್ನೇಹಿತನೇ, ನಿನಗಿದು ಅರ್ಥವಾಯಿತೇ? ಯೇಸುಸ್ವಾಮಿ ಬಿಡುಗಡೆ, ಸಂಧಾನ ಮತ್ತು ನ್ಯಾಯತೀರ್ಪಿನ ಮೂಲಕ ನಿನಗಾಗಿ ಏನನ್ನು ಸಾಧಿಸಿದರೋ ಆ ಮೂಲಕ ನೀನು ದೇವರ ರಾಜ್ಯದ ಪ್ರಜೆಯಾಗಲು ಅರ್ಹನಾಗಿದ್ದೀ ಬರಲಿರುವ ಭೂಮಿಯ ಮೇಲೆ ನಿತ್ಯಕ್ಕೂ ವಾಸಿಸಲಿರುವ ನೀನೂ ಒಬ್ಬ ಸದಸ್ಯನಾಗುವಿ. ಈ ರೀತಿಯಾಗಿ ದೇವರ ರಾಜ್ಯದ ಪ್ರಜೆಯಾಗಲು ಯೇಸುಸ್ವಾಮಿ ನಿನಗೇನು ಮಾಡಿದ್ದಾರೋ ಅದನ್ನು ನೀನು – ಅಂಗೀಕರಿಸಿಕೊಳ್ಳಲು ಸಿದ್ಧನಾಗಿರುವಿಯಾ?

## IV. ಮುಂದಿನ ವಾರ : ಶಿಲುಬೆಯು ಬಳಿ ಪಾಪಪರಿಹಾರ.